ಬೆಂಗಳೂರಿನಲ್ಲಿರುವ ಗ್ರಾಮಗಳಿಗೆ ಒಳಚರಂಡಿ ವ್ಯವಸ್ಥೆ.

ಶ್ರೀ ಎಸ್. ರಮೇಶ್ (ಉತ್ತರಹಳ್ಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದ ಮಧ್ಯಭಾಗದಲ್ಲಿ ಅಲ್ಲಲ್ಲಿ ಕೆಲವು ಗ್ರಾಮಗಳಿದ್ದು ಅವುಗಳ ಸುತ್ತಲೂ ನಗರ ಬೆಳೆದಿರುವುದು ನಿಜವಲ್ಲವೆ ?

ಆ) ಹಾಗಿದ್ದಲ್ಲಿ, ಸದರಿ ಗ್ರಾಮಗಳಿಗೆ ಒಳಚರಂಡಿ ಕಲ್ಪಿಸದಿರುವುದು ನಿಜವಲ್ಲವೆ ?

ಇ) ಇದರಿಂದಾಗಿ ಸದರಿ ಗ್ರಾಮಗಳ ಮಲ ಮೂತ್ರ ಮುಂತಾದುವುಗಳಿಂದ ಸುತ್ತಲೂ ಬೆಳೆದಿರುವ ನಗರ ಪ್ರದೇಶದ ಜನರ ಆರೋಗ್ಯಕ್ಕೆ ದಕ್ಕೆಯುಂಟಾಗುತ್ತಿರುವುದು ನಿಜವಲ್ಲವೆ ?

ಈ) ಸದರಿ ಗ್ರಾಮಗಳಿಗೂ ಒಳಚರಂಡಿ ಕಲ್ಪಿಸುವ ಮೂಲಕ ಜನರ ನೈರ್ಮಲ್ಯ ಕಾಪಾಡುವುದು ಸರ್ಕಾರದವರ ಕರ್ತವ್ಯವಲ್ಲವೆ ?

ಉ) ಹಾಗಿದ್ದಲ್ಲಿ, ಆ ವಿಶೆಯಲ್ಲಿ ಕೂಡಲೇ ಕೈಗೊಳ್ಳಲುದ್ದೇಶಿಸಿರುವ ಕ್ರಮವೇನು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು).—

ಅ) ಹೌದು.

ಆ) ಹೌದು. ಕೇವಲ ಕೆಲವು ಗ್ರಾಮಗಳಿಗೆ ಮಾತ್ರ ಒಳಚರಂಡಿ ವ್ಯವಸ್ಥೆ ಒದಗಿಸಲಾಗಿದೆ.

ಇ) ಕೆಲವು ಪ್ರದೇಶಗಳ ಮಟ್ಟಿಗೆ ಇದು ನಿಜಾಂಶವಾಗಿರಬಹುದು.

ಈ) ಬೆಂಗಳೂರು ನಗರಪಾಲಿಕೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಥವಾ ಗ್ರಾಮ ಪಂಚಾಯಿತಿ ಮುಂತಾದ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಂದ ಮತ್ತು ಅವುಗಳ ವೆಚ್ಚದಿಂದ ಒಳಚರಂಡಿ ಸೌಲಭ್ಯವನ್ನು ಒದಗಿಸಬೇಕು.

ಉ) ಒಳಚರಂಡಿ ಕೆಲಸಗಳನ್ನು ಹಂತ ಹಂತವಾಗಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಕೈಗೊಳ್ಳುತ್ತದೆ.

ಶ್ರೀ ಎಸ್. ರಮೇಶ್.—ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಏನೆಂದರೆ ಬೆಂಗಳೂರು ನಗರದ ಮಧ್ಯ ಭಾಗದಲ್ಲಿ ಅಲ್ಲಲ್ಲಿ ಕೆಲವು ಗ್ರಾಮಗಳಿದ್ದು ಅವುಗಳ ಸುತ್ತಲೂ ನಗರ ಬೆಳೆದಿರುವುದು ನಿಜವಲ್ಲವೆ ? ಎಂದು ಕೇಳಿದ್ದಕ್ಕೆ ಉತ್ತರ ''ಹೌದು'' ಎಂದು ಹೇಳಿದ್ದಾರೆ. ಅದೇ ರೀತಿ ಸದರಿ ಗ್ರಾಮಗಳಿಗೆ ಒಳಚರಂಡಿ ವ್ಯವಸ್ಥೆ ಕಲ್ಪಿಸದಿರುವುದೂ ನಿಜವಲ್ಲವೆ ? ಎಂದು ಕೇಳಿದ್ದಕ್ಕೆ ಕೆಲವು ಗ್ರಾಮಗಳಿಗೆ ಮಾಡಿದ್ದೇವೆಂದು ಉತ್ತರ ಕೊಟ್ಟಿದ್ದಾರೆ. ನನ್ನ ಮತದಾರರ ಕ್ಷೇತ್ರ ಅತಿ ದೊಡ್ಡ ಕ್ಷೇತ್ರ. ಅದು ಬೆಂಗಳೂರಿನ ಸುತ್ತಾ ಇರತಕ್ಕಂಥ ಕ್ಷೇತ್ರ. ಒಳ್ಳೊಳ್ಳೆಯ ಬಡಾವಣೆಗಳ ಮಧ್ಯದಲ್ಲಿ ಹಳ್ಳಿಗಳು ಸೇರಿ ಕೊಂಡಿವೆ. ಅದರ ಸುತ್ತ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಅಕ್ಷೆಖರ್ ಮಾಡಿಕೊಂಡು ಬಡಾವಣೆಗಳನ್ನು ಮಾಡಿದ್ದಾರೆ. ಮಧ್ಯದಲ್ಲಿರತಕ್ಕ ಹಳ್ಳಿಯ ಜನರಿಗೂ ಸಹ ನಾಗರಿಕ ಸೌಲಭ್ಯ ಗಳನ್ನು ಒದಗಿಸಬೇಕಾಗಿದೆ. ಆ ಜನರು ಆಚೆ ಬರುವುದಕ್ಕೆ ಸಾಧ್ಯವಾಗುತ್ತಿಲ್ಲ. ಹಳ್ಳಿಗಳ ಪಂಚಾಯಿತಿ ಗಳಲ್ಲಿ ಹಣವಿಲ್ಲ. ಈ ಬಗ್ಗೆ ಸರ್ಕಾರದವರು ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ? ಆ ಜನರಿಗೆ ಒಳಚರಂಡಿಯ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿ ಗಳನ್ನು ಕೇಳಿಕೊಳುತ್ತೇನೆ.

ಶ್ರೀ ಟಿ ಎನ್. ನರಸಿಂಹಮೂರ್ತಿ (ಮುಖ್ಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿರುವುದು ನಿಜ. ಬೆಂಗಳೂರು ನಗರಕ್ಕೆ ಅನೇಕ ಗ್ರಾಮಗಳು ಸಂತ್ತು ವರಿದಿವೆ. ಆ ಗ್ರಾಮಗಳಿಗೆ ಒಳಚರಂಡಿ ವ್ಯವಸ್ಥೆ ಸರಿಯಾಗಿಲ್ಲ. ಮಾನ್ಯ ಸದಸ್ಯರ ಸಲಹೆ ಉತ್ತಮ ವಾದುದಾಗಿದೆ. ಆ ಎಲ್ಲ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಹಣಕಾಸಿನ ಅವಶ್ಯಕತೆಯಿದೆ. ಆ ಕೆಲಸವನ್ನು ಬೆಂಗಳೂರು ನಗರ ಪ್ರಾಧಿಕಾರದವರು ಮಾಡಬೇಕಾಗಿದೆ. ತಮ್ಮ ಅಭಿಪ್ರಾಯವನ್ನು ಸಂಬಂಧಪಟ್ಟವರಿಗೆ ತಿಳಿಸಿ, ಅಲ್ಲಿನ ನಾಗರಿಕರಿಗೆ ಯಾವುದೇ ರೀತಿ ದೀರ್ಘಕಾಲ ತೊಂದರೆಯಾಗದ ಹಾಗೆ ನೋಡಿಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗುವುದು.

ಶ್ರೀ ಎಸ್. ರಮೇಶ್.—ಸಂಬಂಧಪಟ್ಟ ಅಧಿಕಾರಿಗಳು ಪಂಚಾಯತಿಯ ಮೂಲಕ ಹಣ ಕಟ್ಟಿದರೆ ಒಳಚರಂಡಿ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದ್ದಾರೆ. ನನ್ನ ಪ್ರಶ್ನೆ ಏನೆಂದರೆ ಅಲ್ಲಿನ ನಾಗರಿಕರಿಗೆ ನಾಗರಿಕ ಸೌಲಭ್ಯಗಳನ್ನು ಕೊಡಬೇಡವೇ ? ಆ ಜಾಗದಲ್ಲಿ ಪಂಚಾಯಿತಿಗಳು

ಬರುತ್ತವೆ. ಅಲ್ಲಿನ ಜನರು ಆಚೆ ಬರುವುದಕ್ಕೆ ಆಗುವುದಿಲ್ಲ. ಏಕೆಂದರೆ ಸುತ್ತಾ ಬಡಾವಣೆಗಳು ಇವೆ. ಸರ್ಕಾರದ ವತಿಯಿಂದ ನಗರವನ್ನು ಶುಚಿಯಾಗಿಡುವ ದೃಷ್ಟಿಯಿಂದ ಸರ್ಕಾರ ಮುತುವರ್ಜಿಯನ್ನು ವಹಿಸಿ ಕೆಲಿಸವನ್ನು ತೆಗೆದುಕೊಳ್ಳಬೇಕು. ನಿಮ್ಮ ಅಧಿಕಾರಿಗಳು ಏನು ಹೇಳುತ್ತಾರೆಂದರೆ, ನೀವು ಹಣ ಕಟ್ಟಿಸಿ ನಾವು ಮಾಡುತ್ತೇವೆಂದು ಹೇಳುತ್ತಾರೆ. ಹಾಗೆದರೆ ನಗರವನ್ನು ಚೊಕ್ಕಟವಾಗಿಡುವುದು ಬೇಡವೆ ? ಈ ಕೆಲಸಗಳಿಗೆ ಹಣವನ್ನು ಯಾವ ರೀತಿ ಒದಗಿಸುತ್ತೀರಿ ಎಂಬುದನ್ನು ದಯವಾಡಿ ತಿಳಿಸಬೇಕು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಜನರಿಗೆ ಯಾವರೀತಿಯಲ್ಲಿ ಸಹಾಯ ಮಾಡುತ್ತೀರಿ ಎಂದು ಮಾನ್ಯ ಸದಸ್ಯರು ಕೇಳುತ್ತಿದ್ದಾರೆ. ಮಾನ್ಯ ಸದಸ್ಯರ ಸಲಹೆ ಬಹಳ ಉತ್ತಮವಾದುದಾಗಿದೆ. ಆದರೆ ಹಣದ ಅಭಾವದಿಂದ ಈ ಕೆಲಸ ಆಗಿಲ್ಲ. ಈ ನಾಗರಿಕರಿಗೂ ಸೌಲಭ್ಯಗಳನ್ನು ಒದಗಿಸಲಿಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಆದ್ಯತೆಯ ಆಧಾರದ ಮೇಲೆ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ. ಈ ಬಗ್ಗೆ ಕೆಲಸ ಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ.

ತಡೆಹಿಡಿಯಲಾದ ಪ್ರಶ್ನೆಗಳು

೧೨.೦೫ ಪಿ.ಎಂ.

ರಾಜ್ಯದಲ್ಲಿರುವ ಗೃಹನಿರ್ಮಾಣ ಸಂಘಗಳು

೫೬. ಶ್ರೀ ಡಿ. ಎ. ಚಿನ್ನಪ್ಪ, (ಮಡಕೇರಿ).—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಎ) ಗೃಹ ನಿರ್ಮಾಣ ಸಹಕಾರ ಸಂಘಗಳ ಮೇಲಿನ ಶ್ರೀ ಜಿ. ವಿ. ಕೆ. ರಾವ್‌ರವರ ವರದಿ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

ಬಿ) ಸದರಿ ವರದಿ ಸಲ್ಲಿಸಿದ ಮೇಲೆ ಭೂ ಸ್ವಾಧೀನಪಡಿಸಿಕೊಳ್ಳಲು ಹಾಗೂ ನಿವೇಶನಗಳನ್ನು ಹಂಚಲು ಅನುಮತಿ ನೀಡಲಾಗಿದೆಯೇ?

ಸಿ) ಹಾಗಿದ್ದಲ್ಲಿ ಬೆಂಗಳೂರಿನಲ್ಲಿ ಅಂತಹ ಸಂಘಗಳೆಷ್ಟು ಮತ್ತು ಅವುಗಳ ಹೆಸರುಗಳನ್ನು ನೀಡಿ.

ಡಿ) ತಪ್ಪು ಮಾಡಿರುವ ಸಂಘಗಳ ಮೇಲೆ ಕ್ರಮ ಜರುಗಿಸಲಾಗಿದೆಯೇ;

ಇ) ಹಾಗಿದ್ದಲ್ಲಿ ಅಂತಹ ಸಂಘಗಳೆಷ್ಟು ಮತ್ತು ಹೆಸರುಗಳನ್ನು ನೀಡುವುದು.

ಡಾ॥ ಹೆಚ್. ಆರ್ ರಾಜು (ಸಹಕಾರ ಮಂತ್ರಿಗಳು).—

ಎ) ಜಿ. ವಿ. ಕೆ. ರಾವ್‌ರವರ ವರದಿಯಲ್ಲಿ ಕಂಡು ಬಂದ ಅಂಶಗಳ ಆಧಾರದ ಮೇಲೆ ಕಂದಾಯ ಇಲಾಖೆಗೆ ವರದಿ ಮಾಡಿ ಭೂ ಸ್ವಾಧೀನ ಸಂಬಂಧದಲ್ಲಿ ಗಮನಿಸಲು ಸೂಚಿಸಲಾಗಿದೆ.

ಬಿ) ೧೯ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ಭೂ ಸ್ವಾಧೀನ ಕೆಲಸ ಮುಂಗಿದಿದೆ. ಯಾವುದೆ ಸಹಕಾರ ಸಂಘಕ್ಕೆ ನಿವೇಶನ ಹಂಚಲು ಭೂಮಿ ಕೊಟ್ಟಿಲ್ಲ.

ಸಿ) ೧೯ ಸಂಘಗಳು (ಪಟ್ಟಿ ಲಗತ್ತಿಸಿದೆ) (I)

ಡಿ) ಹೌದು,

ಇ) ಪಟ್ಟಿ ಲಗತ್ತಿಸಿದೆ, (II)

LIST—I

1 BEML House Building Coop Society
2 Canara Bank Employees HBCs
3 Syndicate Bank Employees HBCs
4 HMT Employees HBCs
5 Railwaymen HBCs
6 Balaji HBCs